

ಬಂದೆ ಎಂಬ ಅರ್ಥದಲ್ಲಿ ನೋಡುತ್ತಿದ್ದಾನೆ. ಕಾವ್ಯಳಿಗೆ ವಿಸ್ಮಯವಾಗುತ್ತಿದೆ. ತಂಗಿಯ ಮಗಳು ಅಂತ ಹೇಳಿದ ಕೂಡಲೇ ಈ ಮಾವ ಯಾತಕ್ಕೆ ಈ ರೀತಿ ನಗುತ್ತಿದ್ದಾನೆ? ಇದು ವಿಪರೀತ ಸಂತೋಷವೆ? ಇಲ್ಲ. ಆ ರೀತಿ ಕಾಣುತ್ತಿಲ್ಲ. ನಗುತ್ತಿದ್ದರೂ ಸಹ ಅವನ ಮುಖದ ಭಾವದಲ್ಲಿ ಬೇರೆ ಏನೋ ಇದೆ.

ರುದ್ರನಾಗ ನಗುವುದನ್ನು ನಿಲ್ಲಿಸಿ 'ನಿನ್ನನ್ನು ನೋಡಿ ತುಂಬಾ ಸಂತೋಷವಾಯಿತು. ನಿನ್ನ ತಂದೆ ಮತ್ತು ತಾಯಿ ಹೇಗಿದ್ದಾರೆ?' ರುದ್ರನಾಗನ ನಾಟಕ.

ಕಾವ್ಯ `ಉಫ್' ಎಂದು ಉಸಿರು ಬಿಡುತ್ತಾ 'ಚೆನ್ನಾಗಿದ್ದಾರೆ. ಅಮ್ಮನಿಮ್ಮನ್ನನೋಡಲುನಾಳೆಯೋನಾಡಿದ್ದೋಬರಬಹುದು.' ಅರುಂಧತಿ ತನ್ನ ಎರಡನೆಯ ಮಗಳಿಗೆ ಏನನ್ನೂ ಸಹ ಹೇಳಿಲ್ಲ. ಅಂದ ಮೇಲೆ ನಾನು ಸಹ ಪ್ರೀತಿಯ ನಾಟಕ ಆಡುತ್ತೇನೆ. ಮಲ್ಲಿಗೆಯನ್ನು ಕರೆದು ಸಿಹಿ ಅಡುಗೆಯನ್ನು ಮಾಡಲು ಹೇಳಿ ಉಪಚರಿಸಿದರು.

ಕಾವ್ಯ 'ಮಾವ... ಈ ಮಲ್ಲಿಗೆ ಯಾರು?' ಎಂದು ಕುತೂಹಲದಿಂದ ಕೇಳಿದಳು.

ರುದ್ರನಾಗ ಅವಳ ಮುಖವನ್ನು ಒಂದು ಸಲ ನೋಡಿ 'ನಿನ್ನ ತಾಯಿ ಏನೂ ಹೇಳಿಲ್ಲವೆ?'

'ಇಲ್ಲ ಮಾವ'

`ಇವಳು ನನ್ನ ಮಗಳು' ಒಳಗೆ ಅಡುಗೆ ಮಾಡುತ್ತಿದ್ದ ಮಲ್ಲಿಗೆ ಬೆಚ್ಚಿಬಿದ್ದಳು. ರುದ್ರಮಾವ ಯಾಕೆ ಸುಳ್ಳು ಹೇಳುತ್ತಿದ್ದಾನೆ?

ಕಾವ್ಯ ನಗುತ್ತಲೇ `ಮಾವ... ನಿಮ್ಮ ಮಗಳು ನೂರಕ್ಕೆ ನೂರು ಭಾಗ ನನ್ನ ತಾಯಿಯ ತರಹ ಇದ್ದಾಳೆ.'

ಮನದಲ್ಲಿ ಬಿರುಗಾಳಿ ಏಳುತ್ತಿದೆ. ಅವಳು ಸದಾ ನಿರ್ಲಿಪ್ತೆ. ಆದರೆ ಈಗ ಆಂದೋಲನ ಪ್ರಾರಂಭವಾಗಿದೆ. ಎಲ್ಲೋ ಒಂದು